ದಿನಾಂಕ಼ 04-02-2017 ರಂದು ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲು಼ 2ನೇ ಪ್ರತಿವಾದಿಯ ಪರ , ಶ್ರೀ ಟಿಎಸ್‌ಕೆ ವಕೀಲರಿಂದ ,

2ನೇ ವಾದಿಯವರು ದಾವಾ ಸ್ವತ್ತನ್ನು ಮಲ್ಲಿಕಾರ್ಜುನರವರಿಂದ ಖರೀದಿಸಿದ್ದಾರೆ. ಸದರಿ ಖರೀದಿ ಪತ್ರವನ್ನು ಪ್ರಸ್ತುತ ದಾವೆಯಲ್ಲಿ ಸಲ್ಲಿಸಿದ್ದೇನೆ. ಶರಣಮ್ಮ ಸದರಿ ಸ್ವತ್ತು ಖರೀದಿಸಿದಾಗ ಅದರ ವಿಸ್ತೀರ್ಣ 30 X 40 ಅಡಿ ಇತ್ತು. ಅಲ್ಲಿ ಮನೆ ಇತ್ತು. ನನ್ನ ಹೆಂಡ್ತಿ ನನಗೆ ಸದರಿ ಸ್ವತ್ತಿನ ದಾನಪತ್ರ ಮಾಡಿದಾಗ ಅದರ ಅಳತೆ 30 X 40 ಅಡಿ ಇತ್ತು. ಸ್ವತ್ತಿನ ವಿಸ್ತೀರ್ಣ 40 X 45 ಎಂದು ಮಾಡಿದ್ದರು, ಆದ್ದರಿಂದ ದಾನಪತ್ರದ ತಿದ್ದುಪಡಿ ಮಾಡಿದ್ದೇವೆ. ದಾನಪತ್ರದಲ್ಲಿ ಮೊದಲಿಗೆ ಸ್ವತ್ತಿನ ವಿಸ್ತೀರ್ಣ 40 X 60 ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ದಾನಪತ್ರದ ಶೆಡ್ಯೂಲ್‌ನಲ್ಲಿ ಮೊದಲಿಗೆ ವಿಸ್ತೀರ್ಣ 40 X 45 ಎಂದು ಬರೆದಿದ್ದಾರೆ ಎಂದರೆ ಸರಿಯಲ್ಲ. ದಾನಪತ್ರದ ಸರ್ವರ್ಣ ಪತ್ರ (ತಿದ್ದುಪಡಿಪತ್ರ) ನಲ್ಲಿ ವಿಸ್ತೀರ್ಣ 30 X 40 ಅಡಿ ಎಂದರೆ ಸರಿ . ದಾವಾ ಸ್ವತ್ತು ಮೂಲತ಼ ಯಾರ ಸ್ವತ್ತು ಎನ್ನುವುದು ನನಗೆ ಗೊತ್ತಿಲ್ಲ ಆದರೆ ನನ್ನ ಹೆಂಡ್ತಿ ಸ್ವತ್ತು ಅದರ ಹಿಂದೆ ಮಲ್ಲಿಕಾರ್ಜುನ ಸ್ವತ್ತು ಎಂದು ಸಾಕ್ಷಿ ಸ್ವತ಼ ಉತ್ತರಿಸುತ್ತಾರೆ. ದಾವಾ ಸ್ವತ್ತು ಮೂಲತ಼ ಭಾಗ್ಯಮ್ಮನವರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ಸ್ವಾಧೀನದಲ್ಲಿ ಸ್ವತ್ತು ಇದ್ದಾಗ 30 X 40 ಅಡಿ ವಿಸ್ತೀರ್ಣದ ಖಾಲಿ ಜಾಗ ಇತ್ತು.

ಅದೇ ರೀತಿ ವಸಂತಮ್ಮ ಪಾರ್ವತಮ್ಮನಿಗೆ ಸ್ವತ್ತು ಮಾರಾಟ ಮಾಡಿದಾಗ 30 X 40 ಅಡಿ ವಿಸ್ತೀರ್ಣದ ಖಾಲಿ ನಿವೇಶನ ಇತ್ತು ಎಂದರೆ ಸರಿಯಲ್ಲ. ಅದೇರೀತಿ ಪಾರ್ವತಮ್ಮ ಸ್ವತ್ತನ್ನು ಪೂಜಾರಿ ಮಲ್ಲಿಕಾರ್ಜುನವರಿಗೆ ಮಾರಾಟ ಮಾಡಿದಾಗ 30 X 40 ಅಡಿ ವಿಸ್ತೀರ್ಣದಲ್ಲಿ ಖಾಲಿ ಜಾಗ ಮತ್ತು ಗುಡಿಸಲು ಇತ್ತು ಎಂದರೆ ಸರಿಯಲ್ಲ. ಪೂಜಾರಿ ಮಲ್ಲಿಕಾರ್ಜುನಪ್ಪ ನನ್ನ ಹೆಂಡ್ತಿಗೆ ದಾವಾ ಸ್ವತ್ತು ಮಾರಾಟ ಮಾಡಿದಾಗ ಅದರ ವಿಸ್ತೀರ್ಣ 30 X 40 ಅಡಿ ವಿಸ್ತೀರ್ಣದ ಖಾಲಿ ಜಾಗ ಹಾಗೂ ಗುಡಿಸಲು ಇತ್ತು. ನನ್ನ ಹೆಂಡ್ತಿಯು ಸದರಿ ಸ್ವತ್ತಿನ ಕ್ರಯದಕರಾರು ಪತ್ರ ಮಹದೇವಪ್ಪನ ಹೆಸರಿಗೆ ಮಾಡಿದಾಗ ಅದರ ವಿಸ್ತೀರ್ಣ 30 X 40 ಅಡಿ ವಿಸ್ತೀರ್ಣ ಉಳ್ಳ ಗುಡಿಸಲು ಹಾಗೂ ಖಾಲಿ ಜಾಗ ಇತ್ತು ಎಂದರೆ ಸರಿಯಲ್ಲ. ಸದರಿ ಕ್ರಯದಕರಾರು ಪತ್ರ ಅಸ್ತಿತ್ವದಲ್ಲಿದ್ದಾಗಲೇ ನನ್ನ ಹೆಂಡ್ತಿಯಿಂದ ನಾನು ದಾನಪತ್ರ ಮಾಡಿಕೊಂಡೆ ಅಂದರೆ ಸರಿ . ಸದರಿ ಕ್ರಯದಕರಾರು ಪತ್ರ ನನ್ನ ಹೆಂಡ್ತಿ ಬರೆದುಕೊಟ್ಟ ಬಗ್ಗೆ ನನ್ನ ಮಾಹಿತಿ ಇತ್ತು ಎಂದರೆ ಸರಿ . ಸರ್ವರ್ಣ ಪತ್ರದಲ್ಲಿ ಖಾಲಿ ನಿವೇಶನ ಬರಿಸಿದ್ದೇನೆ ಎಂದರೆ ಸರಿಯಲ್ಲ.

ನಿಪಿ53ರ ಪ್ರಕಾರ ನಾನು ಈಶ್ವರಮ್ಮನವರಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕ್ರಯಪತ್ರ ಬರೆದುಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆಪತ್ರದ ಶೆಡ್ಯೂಲ್‌ನಲ್ಲಿ ಸ್ವತ್ತಿನ ವಿಸ್ತೀರ್ಣ 40 X 45 ಅಡಿಯ ಖಾಲಿ ಜಾಗ ಎಂದು ಬರಿಸಿದ್ದೇನೆ ಎಂದರೆ ನನಗೇನು ಗೊತ್ತಿಲ್ಲ . ಸದರಿ ದಾಖಲೆಯಲ್ಲಿ ನಿಮ್ಮ ಹೆಂಡ್ತಿ ಶರಣಮ್ಮನ ಸಹ ಸಮ್ಮತಿ ಸಾಕ್ಷಿ ಹಾಕಿದ್ದಾರೆ ಎಂದರೆ ಮೋಸ ಮಾಡಿಕೊಂಡಿದ್ದಾರೆ ಎಂದು ಸ್ವತಃ ಉತ್ತರಿಸುತ್ತಾರೆ ಹಾಗೂ ನಿಪಿ53ರಲ್ಲಿನ ಹೆಬ್ಬಟ್ಟನ್ನು ತನ್ನದೇ ಹೆಬ್ಬಟು ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ. ಹಾಗೂ ನಿಪಿ53 ರಲ್ಲಿರುವ ಶರಣಮ್ಮರವರ ಸಹಿಯು ಆಗಿರುತ್ತದೆ. ಈಶ್ವರಮ್ಮರವರು ಸದರಿ ಸ್ವತ್ತನ್ನು ಸುಜಾತರವರಿಗೆ ಮಾರಾಟ ಮಾಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಸುಜಾತರವರೇ ಕಟ್ಟಡ ಕಟ್ಟಿದ್ದಾರೆ ಎಂದರೆ ಸರಿಯಲ್ಲ. ನಾವೇ ಕಟ್ಟಿದ್ದೇವೆ. ಸುಜಾತರವರೇ ವಾಸ ಇದ್ದಾರೆ ಎಂದರೆ ಸರಿಯಲ್ಲ.

ನಾನು ದಾವಾ ಶೆಡ್ಯೂಲ್‌ನಲ್ಲಿ 30 X 40 ಅಳತೆ ಜಾಗದಲ್ಲಿ ಮನೆ ಇದೆ ಎಂದು ಹೇಳಿದ್ದೇನೆ. ವಿಸ್ತೀರ್ಣ ಹೆಚ್ಚು ಕಡಿಮೆ ಮಾಡಿದ್ದೇವೆ ಎಂದು ಸುಜಾತ ನನ್ನ ಹಾಗೂ ನನ್ನ ಹೆಂಡ್ತಿಯ ಮೇಲೆ ಕ್ರಿಮಿನಲ್ ಪ್ರಕರಣ ಹಾಕಿದ್ದಾರೆ ಎಂದರೆ ಸರಿ .

ಕೃಷ್ಣಗುಪ್ತ ಹಾಗೂ ಕೃಷ್ಣಸಿಂಗ್‌ರವರು ನನ್ನ ಹಾಗೂ ಹೆಂಡ್ತಿ ಮೇಲೆ ಚೆಕ್‌ಬೌನ್ಸ್ ಕೇಸ್ ಹಾಕಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಈಶ್ವರಮ್ಮನಿಗೆ ಖರೀದಿ ಪತ್ರ ಬರೆದುಕೊಟ್ಟಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಯಾವುದೇ ಕಟ್ಟಡ ಕಟ್ಟಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲುಃ 3ನೇ ಪ್ರತಿವಾದಿ ಪರ ಶ್ರೀ ಡಿಎನ್‌ಜೆ ವಕೀಲರಿಂದ ,

ನನಗೆ ರಿಯಲ್ ಎಸ್ಟೇಟ್ ಕೆಲಸ ಮಾಡುವ ಶಿರುಗುಪ್ಪದ ನಿವಾಸಿ ಬಿ.ಸತ್ಯನಾರಾಯಣರವರ ಮಗ ಬಿ.ಶ್ರೀರಾಮುಲು ನನಗೆ ಗೊತ್ತಿಲ್ಲ. ನನ್ನ ಹೆಂಡ್ತಿ ನನ್ನ ಹೆಸರಿಗೆ ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಸ್ವಇಚ್ಚೆಯಿಂದ ದಾನಪತ್ರವನ್ನು ಬರೆದುಕೊಟ್ಟಿದ್ದಾರೆ ಎಂದರೆ ಸರಿ . ನನಗೆ ಬರೆದುಕೊಟ್ಟ ನಿಪಿ52 ದಾನಪತ್ರಕ್ಕೆ ಬಿ.ಶ್ರೀರಾಮುಲುರವರು ಸಾಕ್ಷಿಯು ಹಾಕಿದ್ದಾರೆ ಎಂದರೆ ಸರಿ . ನಿಪಿ57 ಹಾಗೂ 58 ರಲ್ಲಿಯು ಸಹ ಬಿ. ಶ್ರೀರಾಮುಲು ಸಾಕ್ಷಿಯಾಗಿ ಸಹಿ ಮಾಡಿದ್ದಾರೆ ಎಂದರೆ ಅವು ಸೃಷ್ಟಿಸಿದ ದಾಖಲೆಗಳು ಹಾಗೂ ನಾನು ಯಾವುದೇ ದಾಖಲೆಗಳನ್ನು ಬರೆದುಕೊಟ್ಟಿಲ್ಲ ಎಂದು ಸಾಕ್ಷಿ ಸ್ವತಃ ಉತ್ತರಿಸುತ್ತಾರೆ. ಬಿ.ಶ್ರೀರಾಮುಲು ನನಗೆ ಗೊತ್ತಿದ್ದರು ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಾವ ಸಲ್ಲಿಸುವ ಕಾಲಕ್ಕೆ ನಾನು ದಾವಾ ಸ್ವತ್ತಿನ ಮಾಲೀಕನಾಗಿರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಈಶ್ವರಮ್ಮನವರು ಸದರಿ ದಾವಾ ಸ್ವತ್ತಿನ ಮಾಲೀಕರಾಗಿದ್ದರು ಎಂದರೆ ಸರಿಯಲ್ಲ. 3ನೇ ಪ್ರತಿವಾದಿ ಶ್ರೀದೇವಿ ವಿರುದ್ಧ ನಾನು ಯಾವುದೇ ಪರಿಹಾರ ಕೇಳಿಲ್ಲ ಎಂದರೆ ಸರಿ . ನಾನು ನನ್ನ ವಾದ ಪತ್ರದಲ್ಲಿ ದಿನಾಂಕಃ 29-05-2011 ಮತ್ತು 31-05-2011 ರ ಪ್ರಾಂಸರಿ ಪತ್ರದಲ್ಲಿ ನನ್ನ ಸಹಿಗಳಿವೆ ಆದರೆ ನಾನು ಅವುಗಳನ್ನು ಬರೆದುಕೊಟ್ಟಿಲ್ಲ ಹಾಗೂ ಹಣ ಪಡೆದಿಲ್ಲ ಎಂದು ಬರಿಸಿದ್ದೇನೆ ಎಂದರೆ ಸರಿ . ದಾನಪತ್ರಗಳು ಹಾಗೂ ಪ್ರೋನೋಟ್ ನೋಟಗಳ ಮಧ್ಯೆ 2 ವರ್ಷಗಳ ಅಂತರ ಇದೆ ಎಂದರೆ ನನಗೆ ಗೊತ್ತಿಲ್ಲ. ಶ್ರೀದೇವಿರವರು ನನ್ನ ಹಾಗೂ ನನ್ನ ಹೆಂಡ್ತಿ ವಿರುದ್ದ ಸಲ್ಲಿಸಿದ ಓಎಸ್ ನಂಃ 74ಃ 2013ಕ್ಕೂ ಹಾಗೂ ಈ ಪ್ರಸ್ತುತ ದಾವೆಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

(ಪಾಟೀ ಸವಾಲಿಗೆ ಮುಂದೂಡಲಾಯಿತು.)

(ನನ್ನ ಹೇಳಿಕೆಯಂತೆ ಮುಕ್ತನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).

ಓ ಹೇ ಕೇ ಸರಿ ಅದೆ ,

ಸಿನಿಯರ್ ಸಿವಿಲ್ ನ್ಯಾಯಾಧೀಶರು ,ಶಿರುಗುಪ್ಪ